Regn No BG 155

Sri
" SATYAVADI "
— DAILY —
MYSORE 4
45 th Year

Protect the cow

— ೫೬ —

# ಸತ್ಯವಾದಿ

ಸ್ಥಾಪಕರು— ಅಕಮನೆ ಸಿಂಪ್ಸೇದಾರ್ ಎಂ. ವಿ ಸುಬ್ಬರಾಯುರು [ಬಿಡಿ ಪ್ರತಿ 3 ಪೈ

61

ದಿನಪತ್ರಿಕೆ ವರ್ಷಕ್ಕೆ 6 ಅನೆ

ಗೋಸಂರಕ್ಷಣೆ

## ಹಿಮಾಲಯ ಗಡಿ ಚೆನಾಗಿ ರಕಿಸಲಟಿದೆ

ನವದೆಹಲಿ 11 — ಚೀನಾದೊಡನೆ ಹಿಮಾಲಯದ ಗಡಿ ಚೆನ್ನಾಗಿ ರಕ್ಷಿಸಲ್ಪಟ್ಟಿದೆಯೆಂದೂ, ನನ್ನ ದೇಶದೊಳಗೆ ಇನ್ನು ನುಗ್ಗಲು ಅಸಾಧ್ಯವೆಂದೂ ಭಾರತ ರಕ್ಷಣಾ ಮಂತ್ರಿ ಶ್ರೀ ಕೃಷ್ಣ ಮೆನನ್ನರು ಲೋಕಸಭೆಯಲ್ಲಿ ತಿಳಿಸಿದರು.

### ಪಾಳೆಯಗಾರಿಕೆ ವಜಾ

ಕಟ್ಟಂಡ 11— ಸೇವಾಳದ ಮಹೇಂದ್ರ ಅವರು ಅಲ್ಲಿ ೧೫ ನಾಯಕರ ಪಾಳ್ಳೇಗಾರಿಕೆಯನ್ನು ವಜಾಮಾಡಿ ಅ ಸ್ಥಳಗಳನ್ನೆಲ್ಲಾ ರಾಜ್ಯಕ್ಕೆ ಸೇರಿಸಿಕೊಂಡ ವು — ಎಂಡು ಶತಮಾನಗಳಿಂದಲೂ ಈ ಪದ್ಧತಿ ನಡೆದುಬಂದಿತ್ತು.

### ಪರಿಹಾರ ಕೇಳಿಕೆ

ನವದೆಹಲಿ 11— ಕಳೆದ ಫೆಬ್ರವರಿಯಲ್ಲಿ ತಮ್ಮ ರಾಯಭಾರಿ ಕಚೇರಿ ಮುಂದೆ ನಡೆಸಲಾದ ಪ್ರದರ್ಶನದಿಂದ ಚಾರ್ಜ್ ಡೇಜು ಸಾಮಾನು ಪರಂಜಾ ಪೆಂಗೆ ಇದ ಡ್ಯಾಮೇಜಿಗಾಗಿ ಕಲ್ಕತ್ತಾ ದಲ್ಲಿರು ಬೆಲ್ಜಿಯಂ ರಾಯಭಾರಿ ಕಚೇರಿ ಯವರು ರೂ. 5100 ಪರಿಹಾರ ಕೇಳಿರುವರೆಂದು ಪಂ|| ನೆಹರು ಲೋಕಸಭೆಯಲ್ಲಿ ತಿಳಿಸಿದರು.

### ಅಭಿವೃದ್ಧಿ ನಿಧಿ

ನವದೆಹಲಿ 11— ಮುಂಬೈ ಯೋಜನೆಯಲ್ಲಿ ಹಡಗುಗಳ ಒಗ್ಗೆ ನಿಗದಿಪಡಿಸಿರುವ ರೂ. 55 ಕೋಟಿಗಳಲ್ಲಿ ಭಾರತ ಹಡಗು ಅಭಿವೃದ್ಧಿ ನಿಧಿಗೆ ರೂ. 35 ಕೋಟಿ ಕೊಡಲಾಗುವುದು.

---

ವಾಷಿಂಗ್ಟನ್ 11— ಭಾರತ ಸರಕಾರದ ಕಾರ್ಪೊರೇಷನ್ನಿಗೆ ಪಣ್ಣಾ ಕೈಗಾರಿಕೆ ಸಲಕರಣೆ ಕೊಳ್ಳಲು 10 ಮಿಲಿಯ ಡಾಲರು ಸಾಲ ನೀಡುವದನ್ನು ಅಭಿವೃದ್ಧಿ ಸಾಲ ನಿಧಿ ಪ್ರಕಟಿಸಿದೆ.

### ಕೃಪಾಲಿನಿಯವರ ಟೀಕೆ

ನವದೆಹಲಿ 11 — ಸೈನ್ಯದ ಪೋಷಣೆಯನ್ನಿನಲ್ಲಿ ಸಿಕ್ಕಾಪಟ್ಟೆ ಇರುವುದೆಂದೂ ಮೆನನ್ನರು ಸೈನ್ಯದಲ್ಲಿ ಒಳಸಂಚುಗಳನ್ನು ಸೃಷ್ಟಿಸಿರುವರೆಂದೂ, ಸೈನ್ಯದ ನೀತಿವಟ್ಟ ತಗ್ಗಿಸಿ, ಬಡ ಜನತೆಯ ಹಣವನ್ನು ಹಾಳುಮಾಡಿ, ದೇಶದ ಪಂಕ್ಷಣೆಯನ್ನು ನಿರ್ಲಕ್ಷಿಸಿರುವರು ; ಈ ಒಗ್ಗೆ ಒಂದು ವಿಚಾರಣಾ ಸಮಿತಿ ನೇಮಕವಾಗಬೇಕೆಂದು ಆಚಾರ್ಯ ಕೃಪಾಲಿನಿಯವರು ಲೋಕಸಭೆಯಲ್ಲಿ ಹೇಳಿದರು.

### ಅಧಿಕೃತಪಟ್ಟಿಲ್ಲ

ಮಾಸ್ಕೊ 11 — ಬಾಹ್ಯಾಕಾಶಕ್ಕೆ ಮಾನವನನ್ನು ಕಳಿಸಿರುವ ವಿಷಯವು ಇನ್ನೂ ಅಧಿಕೃತವಾಗಿ ಪ್ರಕಟವಾಗಿಲ್ಲ : ಕಳಿಸಿರುವ ಮಾನವನು ಹಿಂತಿರುಗಿ ಬಂದಿರುವನೋ ಇನ್ನೂ ಬಂದಿರುವುದಿಲ್ಲವೋ ಗೊತ್ತಿಲ್ಲ.

### ಅದ್ಭುತ ವಿಷಯ

ಕಲ್ಕತ್ತಾ 11— ಬಾಹ್ಯಾಕಾಶಕ್ಕೆ ಮಾನವನನ್ನು ಕಳಿಸಿರುವುದು ಅದ್ಭುತ ವಿಷಯ, ಎಂದು ರಷ್ಯಾ ಬಾಹ್ಯಾಕಾಶಕ್ಕೆ ಮಾನವನನ್ನು ಕಳಿಸಿರುವುದರ ವಿತೆರೆಯನ್ನು ಕಲ್ಕತ್ತಾ ಪತ್ರಿಕೆಯೊಂದರಲ್ಲಿ ಓದಿದ ಪಂ|| ನೆಹರು ಹೇಳಿದರು.

### ಹೊಡೆದಾಟ

ಲಿಯೊಪಾಲ್ಡವಿಲ್ಲೆ 11 — ದಕ್ಷಿಣ ಕಾಸಾಯಿನ ಬಾಕವಂಕದಲ್ಲಿ ಭಾನುವಾರ ವಿಶ್ವಸಂಸ್ಥೆ ಭಾರತ ಸೈನ್ಯ ಕ್ಕೂ ದಕ್ಷಿಣ ಕಸಾಯಿ ಅಧ್ಯಕ್ಷ ಅಲ್ಬರ್ಟ್ ಕಲಾಂಜಿ ಸೈನ್ಯಕ್ಕೂ ಹೊಡೆದಾಟವಾಯಿತು ; ಸಾವುನೋವುಗಳು ವರದಿಯಾಗಿಲ್ಲ.

---

ಸೌಮಾನ ಹುಗಾವಿ ಪ್ರಯುಕ್ತ ನಾಳೆ ಸತ್ಯವಾದಿ ಕಾರ್ಯಾಲಯಕ್ಕೆ ರಜ.

### ವಿವಿಧ ವಿಷಯಗಳು

ನವದೆಹಲಿ 11 — ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯು, ಪೌಷ್ಟಿಕವಾದ, ರುಚಿಕರವಾದ ಮೌಲ್ಯ ಮಾಡಿದ ಹಾಲಿನ ಪುಡಿಯನ್ನು ಮೀನಿನ ಶತ್ಸಂಬಂಧ ವಸ್ತುಗಳ ಶಯೂರಿಕೆಯಲ್ಲಿ ಸುಧಾರಿಸಿದ ವಿಧಾನವನ್ನು ಕಂಡುಹಿಡಿದಿದೆ.

ನವದೆಹಲಿ 11— ಚಿಕ್ಕ ಬ್ಯಾಂಕುಗಳ ಲಿಕ್ವಿಡೇಷನ್ನಿಗಿಂತ ಬೇರೆ ಬ್ಯಾಂಕುಗಳೊಡನೆ ಸೇರಿಸಿ ವೃದ್ಧಿ ಹೆಚ್ಚು ಆದರವಾದುದೆಂದು ಭಾರತದ ಹಣಕಾಸಿನ ಮಂತ್ರಿ ದೇಸಾಯರು ಅಭಿಪ್ರಾಯ ವ್ಯಕ್ತಪಡಿಸಿರುವರು.

ಲಂಡನ್ 11— ವಾಷಿಂಗ್ಟನ್ನಿನಲ್ಲಿ ಮೆಕ್ಕಿಲ್ಲ-ಕೆನಡಿ ಮಾತುಕತೆಯ ನಂತರ ಬ್ರಿಟನ್ ಸರಕಾರವು ಕನ್ನ ಅಣುಬಾಂಬರು ಪಡೆಯುವುದನ್ನು ನಾಟೋದಲ್ಲಿ ಸೇರಿಸಲು ಇಚ್ಛೆ ಪಟ್ಟಿಲ್ಲ.

### ಪಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞಶಿಖಾಮಣಿ
ಸಂಪಕ್ಕೆಯ್ಯನ ಜೋಯಿಸರಿಂದ
13 ಗುರುವಾರ ಶಯೋದಶಿ ಪೂಭಾ

### ರಿಟ್ ಅರ್ಜಿ

ದುರ್ವರ್ತನೆ ಆರೋಪನೆಗಾಗಿ ಶ್ರೀ ಮಲ್ಲತಾರಾಧ್ಯ ಮಗ ಜ್ಞಿ ಎಂ. ಎಚ್. ಪ್ರಸಾದರನ್ನು ಎಂಡು ವರ್ಷ ಡಿಬಾರು ಮಾಡಲು ಮೈಸೂರು ವಿಶ್ವವಿದ್ಯಾನಿಲಯ ಮಾಡಿದ ನಿರ್ಣಯವನ್ನು ಹೊಡೆದು ಹಾಕುವಂತೆ ಅವರು ಹೈ ಕೋರ್ಟಿನಲ್ಲಿ ಹಾಕಿದ ಅರ್ಜಿಯು ಅಡ್ಮಿಟ್ ಆಯಿತು.

★

### 39 ವರ್ಷಗಳ ಅಲೆಯಾಟ !

ಸೆಡ್‌ಬೈರಂಘಸೆಂಬುವ 53 ವರ್ಷದ ರಂಜನನು 39 ವರ್ಷಗಳಿಂದ ಪರಿಯಾದ ರಹದಾರಿ ಇಲ್ಲದೇನೇ ದೇಶದೇಶಗಳನ್ನು, ಭಾರತದಲ್ಲೂ ಕೂಡ ಸುತ್ತಾಡಿದನು — 1922 ರಲ್ಲಿ ರಷ್ಯಾ ಸೋಲ್ಜರೆಂದು ಹಂಸೆಗೊಳಗಾದನು ; ಟೋಟರ್ಕಾಮಿನಲ್ಲಿ ಕ್ಷಯ ರೋಗಕ್ಕಾಗಿ ಪ್ಯಾನಿಟೋರಿಯಂನಲ್ಲಿ ಚಿಕಿತ್ಸೆ ಪಡೆದನು ; ಡಜ಼ು ಪತ್ರಿಕೆಗಳು ಇವನ ಸಾಹಸ ಪ್ರಕಟಿಸಿದ ನಂತರ ಪರಿಯಾದ ರಹದಾರಿ ಸಿಕ್ಕಿ, ಅಲ್ಲಿ ಹಳ್ಳಿ ಕೆಲಸ ದೊರೆತು ಪ್ರವಾದನು !

ನಿಮಗೆ ಬಲಹೀನತೆ ಉಂಟೇ ?
ಹಾಗಾದರೆ ವೈದ್ಯರಾದ ಎ. ಎಲ್ ಸರ್ಕಾರ್ (ಸರ್ಕಾರ್ ರಿಜಿಸ್ಟರ್ಡ್) ವಕ್ತ ಡಾ|| ಎಚ್. ಎಂ. ಆರ್. ಮೋಥಿಂರವನ್ನು ಖುದ್ದು ಭೇಟಿಮಾಡಿ
ಅವರು ನರಗಳ ನಿಶ್ಯಕ್ತಿ, ಬಹುಮೂತ್ರ, ಮೂಲವ್ಯಾಧಿ ಮುಂತಾದ ವ್ಯಾಧಿಗಳಿಗೆ ವಿಫಲವಾಗದ ಚಿಕಿತ್ಸೆ ನಡೆಸುವರು
ನರಗಳ ನಿಶ್ಯಕ್ತಿಗೆ ವಿದ್ಯುಚ್ಛಕ್ತಿ (ಎಲೆಕ್ಟ್ರೊ ಥೆರೊಪಿ) ಮೂಲಕ ಚಿಕಿತ್ಸೆ

ಸಲಹೆಯ ಕಾಲ : ಬೆಳಿಗ್ಗೆ 10 ರಿಂದ 1 ಗಂಟೆ ಸಂಜೆ : 5 ರಿಂದ 8-30 ಗಂಟೆ
ಭಾನುವಾರ ಬೆಳಿಗ್ಗೆ 10 ರಿಂದ 1 ಗಂಟೆ
ಸರ್ಕಾರ್ ಡಿಸ್ಪೆನ್ಸರಿ
263 ರಘುಲಾಲ್ ಅಂಡ್ ಕೋ ಬಳಿ, ಮೈಸೂರು

## ರಾಷ್ಟ್ರೀಯ ಪುಷ್ಪ

[ ಎಂ. ಆರ್. ಭಟ್ ]

ಜಗತ್ತಿನ [illegible] ಒಂದು ರಾಷ್ಟ್ರೀಯ ಪುಷ್ಪವಿದೆ : ನಮ್ಮ ದೇಶದ ರಾಷ್ಟ್ರೀಯ [illegible] ಕಮಲವಾಗಿದೆ ; ನಮ್ಮ ಕವಿಗಳು ಕಮಲದ ಮೇಲೆ ಕವಿತೆಗಳನ್ನು ಬರೆದು ಹಾಡಿರುವರು ; ನಮ್ಮ ಸಾಹಿತಿಗಳು ಕಮಲದ ಉಪಮೆ [illegible] ಪ್ರಯೋಜನ ಕೊಟ್ಟಿರುವರು. ಕಮಲವು ಸೌಂದರ್ಯಸಂಪನ್ನ, ಪವಿತ್ರ [illegible] ಚಿತ್ತದ ಆಹ್ಲಾದಕ, ನೇತ್ರಗಳಿಗೆ ಸಂತೋಷಕರ, ಮಂದಸುಗಂಧ ಪರಿಪೂರ್ಣ ಹಾಗೂ ಸಮನವಾಗಿದೆ ; ಇದರ ಗಂಧವು ಅದ್ಭುತವಾ [illegible] ಸರ್ವವೂ ಅನುಪಮ ; ಇದರ ಸ್ವರೂಪವು ಮನೋಹರ [illegible] ಆಕರ್ಷಕ : ನಮ್ಮ ಕಮಲವು ಸರ್ವಾಂಗಸುಂದರವೂ [illegible] ಆಗಿದೆ ಇದು ಕೆರೆಗಳಲ್ಲಿ, ಪಟ್ಟಾಕಗಳಲ್ಲಿ, ಸರೋವರಗಳಲ್ಲಿ ಹಾಗೂ ಸಣ್ಣ ಜಲಾಶಯಗಳಲ್ಲಿ ಬೆಳೆಯುತ್ತದೆ ನಮ್ಮ ಕಮಲವು ಪರಮೋತ್ಕೃಷ್ಟ, ಸರ್ವೋತ್ತಮ ಹಾಗೂ ಪರಮಪವಿತ್ರವಾಗಿದೆ, ಜಲದಲ್ಲಿ ಇದ್ದರೂ ಜಲವು ಇದನ್ನು ಸ್ಪರ್ಶಿಸಿ ಅಂಟಿಸಿಕೊಳ್ಳುವುದಿಲ್ಲ : ಪುಷ್ಪವು ಮಾತ್ರವಲ್ಲ, ಕಮಲಪತ್ರಗಳು ಸಹ ಜಲದಿಂದ ಸ್ಪರ್ಶಿಸಲ್ಪಡುವುದಿಲ್ಲ, ಅಂಟಿಸಲ್ಪಡುವುಗಲ್ಲ ; ಮಹಾತ್ಮಾನಿಯಂತೆ ನಿರ್ಲೇಪವಾಗಿರುತ್ತದೆ. ಭಗವಂತನಂತೆ ಜಲದಲ್ಲಿ ಇದ್ದು ಜಲದಿಂದ ಬೇರೆಯಾಗಿ ಕಾಣಿಸುತ್ತದೆ. ನಮ್ಮ ಕಮಲವು ಪರಮ ತಪಸ್ವಿಯಾಗಿ ಜಲದಲ್ಲಿ ನಿಂತು ತಪಸ್ಸನ್ನು ಮಾಡುತ್ತಿರುತ್ತದೆ ; ಆದರೆ ಇದು ಜಲದಿಂದ ವಿಂಹಿತವಾಗಿಯೇ ಇರುತ್ತದೆ. ' ಪದ್ಮಪತ್ರಮಿವಾಂಭಸಾ ' ಎಂದು ತತ್ವಜ್ಞಾನಿಗಳು ಜೀವನದ ಆದರ್ಶ ಕುರಿತು ಜಗತ್ತಿನಲ್ಲಿ ಇಂಜೀಕೆಂದೂ ನಿರ್ಲಿಪ್ತರಾಗಿ ಇರಬೇಕೆಂದೂ ಈ ಉಪಮೆಯನ್ನು ಪ್ರಯೋಗಿಸಿರುವರು

ಸುಂದರ ನಯನಗಳನ್ನು ಕಮಲಕ್ಕೆ ಹೋಲಿಸುತ್ತಾರೆ : ಭಗವಂತನ ಚರಣ ಕಮಲಗಳನ್ನು ನಿತ್ಯವೂ ಆರಾಧಿಸುತ್ತಾರೆ : ದೀನ, ಅತಿದೀನ, ದರಿದ್ರ, ಬಂಧು ಭಗಿನಿಯರನ್ನೂ, ದುಃಖಿತ ವಿಧವೆಯರನ್ನೂ ಸಮಾಜವು ಅವಹೇಳನ ಮಾಡುತ್ತದೆ : ಪೀಡಿಸುತ್ತದೆ ; ಸಮಾಜವು ಇವರೆನ್ನೆಲ್ಲ ತ್ಯಜಿಸುತ್ತದೆ, ದಯಾಳು ವುತ್ಯನ್ನು ಜನಿಸಿದ ಮಾತೆಯರು ವುತ್ಯ ಚರಣ ಕಮಲದ ಸ್ಪರ್ಶದಿಂದಲೇ ಆನಂದಿತರಾಗುತ್ತಾರೆ ಈ ಚರಣ ಕಮಲಗಳೇ ಭಗವಂತನ ಚರಣ ಕಮಲಗಳೆಂದು ಏಕೆ ಭಾವಿಸಬಾರದು ? ಜಗತ್ತಿನ ದುಃಖಿತ ಹಾಗೂ ಪೀಡಿತ ಜನರು ಭಗವಂತನ ಚರಣ ಕಮಲಗಳೆಂದು ಪೂರ್ವಜರು ಹೇಳಿರುವರು ; ಈ ಪೀಡಿತ ಜನವೆಲ್ಲ ಸಹನಾ ಭೂತಿಯನ್ನು ಸಮವೇದನೆಯನ್ನೂ ಬಯಸುತ್ತಾರೆ. ಭಗವಂತನ ಚರಣಗಳು ವ್ಯಪ್ತವಾಸವನ್ನು ಉದ್ಧರಿಸಿರುತ್ತವೆ.

' ಎಲೈ ಭಗವಂತನೇ, ನನ್ನ ಚಿತ್ತವನ್ನು ನಿನ್ನ ಚರಣ ಕಮಲದಲ್ಲಿ ನಿಶ್ಚಲವಾಗಿ ಇರಿಸು ; ಎಲೈ ಮಹಾಪ್ರಭೋ, ನನ್ನನ್ನು ಅನಂದಿತನನ್ನಾಗಿ ಮಾಡು ' ಎಂದು ವಿಶ್ವಕವಿ ರವೀಂದ್ರನಾಥ ಟಾಗೂರರು ಹೇಳಿರುವರು

ಕಮಲವು ನಮ್ಮ ರಾಷ್ಟ್ರೀಯ ಪುಷ್ಪವು : ಕಮಲದ ಮಹಿಮೆಯನ್ನು ಪ್ರತಿಯೊಬ್ಬ ಭಾರತೀಯರೂ ತಿಳಿದುಕೊಳ್ಳಬೇಕು : ನಮ್ಮ ರಾಷ್ಟ್ರೀಯ ಪುಷ್ಪವನ್ನು ಹಿಂದಿನ ಕವಿಗಳೆಲ್ಲ ಗೌರವದಿಂದ ಕೊಂಡಾಡಿದ್ದಾರೆ : ನಾವು ಇದೀಗ ಇದರ ಗೌರವವನ್ನು ಉಳಿಸಿ ಕೊಂಡಾಡಬೇಕು. [ ಮಂ. ಪ್ರ ]


## Help ' The Gorakshana '

**Advertise in Goraksana and help the pious cause**

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ವ್ಯಾಪಾರದಲ್ಲಿ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರ

ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣಾ ಪತ್ರಿಕೆಗೆ ಪಶುಸಂಪತ್ತನ್ನು ಮುಕ್ತ ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ಸಂಪಾದಕರಿಗೆ ಸ್ವೀಕರಿಸಲಾಗುವುದು



★ SEE TO-DAY ★

## At Woodlands : From 7–4–61

Never before on the Screen— The glories, The Triumphs, the Conquests of the World's mightiest man !

# HERCULES UNCHAINED

Steve Reeves as Hercules — — in Eastman Color

**See** War of Chariots, Arena of Tigers, Court of Lover, Temptress Lydia, Contest of Giants, Combat of Kings

## ಆಪೆರಾ— 10–4–61 ರಿಂದ

.... ಪ್ರತಿ ಸಂಸಾರವೂ ನೋಡಬೇಕಾದ ಸಾಮಾಜಿಕ ಚಿತ್ರ ....

## ಉತ್ತಮಪುತ್ರ ರತ್ನಂ (ತಮಿಳ್)

ಪಾತ್ರ— ಕನ್ನಾಂಬ, ಮಹಲಿನ, ಪಂಡರಿಬಾಯಿ, ಎಂ ಎಸ್ ರಾಜ್ಯಂ ವಿ ಕೆ ರಾಮಸ್ವಾಮಿ, ಕುಲದೈವಂ ರಾಜಗೋಪಾಲ್, ಸಹಸ್ರನಾಮಂ, ಬಾಲಾಜಿ

# SHAKTI SUDHA

**

## A Superb Tonic

## Advertise in

## Sri ' SATYAVADI Daily

Oldest Newspaper in the State ; Splendid Advertiser

**Advertisement Tariff**

| | | |
|---|---|---|
| Casual | | Rs 2-50 per inch |
| Contract above | 100 inches | 2-00 ,, |
| | 500 ,, | 1-50 ,, |

Columa length 12½ inches ; width 2 inches ; 4 columns to a page

The decision of the management is final in all matters.

Manager ' Satyavadi ' Chamarajpuram, Mysore


Edited, Printed & Published by the Proprietor Dharma Prachara Nirata M. S. Krishna Rao, at the Satyavadi Press Chamarajapuram, Mysore 4